ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **04**

ಸಿ.ಡಬ್ಲ್ಯೂಃ **03**

| | |
|---|---|
| ಸಾಕ್ಷಿಯ ಹೆಸರು | ಮಯೂರ್ |
| ತಂದೆ/ಗಂಡನ ಹೆಸರು | ಜಗದೀಶ್ |
| ವಯಸ್ಸು | 28 ವರ್ಷ |
| ಉದ್ಯೋಗ | ಇಂಜಿನಿಯರ್ |
| ವಿಳಾಸ | ಪಾಂಡವಪುರ ಟೌನ್ |

ಸಾಕ್ಷಿಗೆ ದಿನಾಂಕ **10.07.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **1** ಮತ್ತು **2** ರವರು ಗೊತ್ತು.

ಸಾಕ್ಷಿಗೆ ನಿಪಿ **2** ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ **2** ಸಿ ಎಂದು ಗುರುತಿಸಲಾಯಿತು. ದಿ.**02.04.2021** ರಂದು ಅಪಘಾತ ನಡೆದ ಸ್ಥಳದಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಅಪಘಾತ ಸ್ಥಳವನ್ನು ಚಾ ಸಾ **1** ರವರು ತೋರಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾ ಸಾ **2** ರವರು ಇದ್ದರು ಆಗ ಸಮಯ ಸುಮಾರು **8.30-9.00** ಗಂಟೆ ಆಗಿರಬಹುದು. ಅಪಘಾತಕ್ಕೀಡಾದ ವಾಹನಗಳು ಇದ್ದು ಕೆ.ಎಸ್.ಆರ್.ಟಿ.ಸಿ ಬಸ್ ನಂ. ಕೆಎ-**11**-ಎಫ್-**0414** ಆಗಿರುತ್ತದೆ. ಐ-**20** ಕಾರ್ ನ ಸಂಖ್ಯೆ ಕೆಎ-**11**-ಎಂ-**8876** ಆಗಿರುತ್ತದೆ. ಸಾಕ್ಷಿಗೆ ಅಪಘಾತಕ್ಕೀಡಾದ ವಾಹನದ **2** ಛಾಯಚಿತ್ರಗಳನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ **4** ಮತ್ತು **5** ಎಂದು, ಸಾಕ್ಷಿಗೆ ಅಪಘಾತಕ್ಕೀಡಾದ ಕಾರ್ ನ **2** ಛಾಯಚಿತ್ರಗಳನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ **6** ಮತ್ತು **7** ಎಂದು ಗುರುತಿಸಲಾಯಿತು.

## ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ

ನಾನು ಚಾ ಸಾ 1 ಮತ್ತು 2 ನನ್ನ ಸ್ನೇಹಿತರು. ಪೋಲಿಸರು ನನಗೆ ಮಹಜರ್ ಗೆ ಹಾಜರಾಗುವಂತೆ ನೋಟೀಸ್ ನೀಡಿಲ್ಲ. ವೈನ್ ಸ್ಟೋರ್ ಅಕ್ಕ-ಪಕ್ಕ ಅಂಗಡಿ ಮುಗ್ಗಟ್ಟು ಇವೆ ಎಂದರೆ ಸರಿ. ಸದರಿ ವೈನ್ ಸ್ಟೋರ್ ಮುಂಭಾಗದಲ್ಲಿ ಒಂದು ವೇಗ ನಿರೋದಕ ಹಂಪ್ ಇದೆ ಎಂದರೆ ಸರಿ. ಮೈ-ಬೆಂಗಳೂರು ಹೆದ್ದಾರಿ ವಾಹನದಟ್ಟನೆಯಿಂದ ಕೂಡಿರುತ್ತದೆ ಎಂದರೆ ಸರಿ. ಪೋಲಿಸರು ಅಪಘಾತಕ್ಕೀಡಾದ ಸ್ಥಳದಲ್ಲಿ ಛಾಯಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ. ನಿಪಿ 4 ರಿಂದ 7 ಅಪಘಾತ ಸ್ಥಳದಲ್ಲಿ ತೆಗೆದಿರುವ ಛಾಯಚಿತ್ರಗಳಲ್ಲ ಎಂದರೆ ಸರಿ. ಹೊಂಡೈ ಹೈ-10 ಕಾರಿನ ಬಲಭಾಗಕ್ಕೆ ಯಾವುದೇ ಜಕಂ ಆಗಿಲ್ಲ ಎಂದರೆ ಸರಿ. ನಾನು ಚಾ ಸಾ 1 ಮತ್ತು 2 ರವರಿಗೆ ಅನುಕೂಲವಾಗಲಿ ಎಂದು ಠಾಣೆಯಲ್ಲಿ ಸಹಿ ಮಾಡಿದ್ದರು ಸಹ ಅಪಘಾತ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲಿಸರು ಬರೆದ ಮಹಜರ್ ಗೆ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ, ನಾನು ಖುದ್ದಾಗಿ ಓದಿ ಸಹಿ ಮಾಡಿರುವುದಿಲ್ಲ.

ಮರು ವಿಚಾರಣೆ ಇಲ್ಲಃ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ